ಪೋಲಿಸ್ ಇಲಾಖಾ.

ತಾರೀಖು 26ನೇ ಫಿಬ್ರವರೀ 1877.

ಮೈಸೂರು ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರ್ ಮುಹಮದ್ ಇಸಫೆಯವರಿಗೆ, 1877ನೇ ಇಸವೀ ಜನವರೀ 14ನೇ ತಾರೀಖು ಲಗಾಯ್ತು 2 ತಿಂಗಳ ಖಾಯಿಲೇ ರಜಾ ಕೊಡಲ್ಪಟ್ಟಿರುತ್ತೆ.

ಮೈಸೂರು ಡಿಸ್ಟ್ರಿಕ್ಟ್ ಸಬ್ ಇನ್ಸ್‌ಪೆಕ್ಟರ್ ಸಯ್ಯದ್ ಅಹಮದ್‌ಯವರಿಗೆ, 1876ನೇ ಇಸವೀ ಡಿಶಂಬರ್ 28ನೇ ತಾರೀಖು ಲಗಾಯ್ತು 1877ನೇ ಜನವರೀ 16ನೇ ತಾರೀಖು ವರಿಗೂ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

"ಹುಕ್ಕುಂ ಬಮೋಜೀಬ್,"

J. S. F. MACKENZIE,
Offg. Dy. Inspector General of Police.

ಇನಾಂ ಇಲಾಖಾ.

ನಂ. 18½. ತಾರೀಖು 15ನೇ ಫಿಬ್ರವರೀ 1877.

1876ನೇ ಡಿಶಂಬರ್ 9ನೇ ಮರ್ಕುಮಿನ ಮೈಸೂರು ಗೆಜೆಟ್ಟಿನಲ್ಲಿ ಫಾಯಿಷ್ ಮಾಡಲ್ಪಟ್ಟ ಅದೇ ಸಾಲ್ ಮೊಹೇ ತಾರೀಖು 5ನೇ ಮರ್ಕುಂ 12ನೇ ನಂಬರ್ ಬಾಬತು ಈ ಆಫೀಸ್ ಇಸ್ತಿಹಾರ್‌ನಾಮೆಯನ್ನು ರದ್ದುಪಡಿಸಿ ಇದರಿಂದ ಪ್ರಕಟಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟ್ ಪೈಕಿ ಹಾಸನದ ತಾಲ್ಲೂಕಿನಲ್ಲಿರುವ ಇನಾಂಗಳ ದೃಢತ್ವದ ವಿಚಾರಣೆಯು, ಹಾಸನ ಕಸಬೆಯಲ್ಲಿ ಇನಾಂ ಸೆಟಿಲ್‌ಮೆಂಟ್ ಆ॥ ಸೂಪರ್‌ಟೆಂಡೆಂಟ್ ಮೆ॥ ಟಿ. ಶ್ರೀನಿವಾಸಯ್ಯಂಗಾರ್ರಿಂದ ನಡಿಸಲ್ಪಟ್ಟು, ಭರುವ ಮಾರ್ಚಿ 15ನೇ ಮರ್ಕುಂನಲ್ಲಿ ಷುರು ನಾಗುವದು. ಸದರೀ ತಾಲ್ಲೂಕಿನೊಳಗೆ ಇರುವ ಇನಾಂಗಳ್ಗೆ ಸಂಬಂಧಿಸಿದ ದರೋಬಸ್ತು ಜನಗಳು, ತಮ್ಮ ತಮ್ಮ ಹಕ್ಕುದಾರೀಗಳನ್ನು ಕರಿತು ವ್ಯವಹರಿಸಲಿಕ್ಕೂ, ತಮ್ಮ ಬಳಿ ಇರುವ ಸನ್ನದು ವಗೈರೇ ದಸ್ತಾವೇಜುಗಳನ್ನು ಹಾಜರ್ ಮಾಡಲಿಕ್ಕೂ ಖುದಾ ಗಿಯಾಗಲೀ ಮುತಾಲೀಕರ ಮೂಲಕವಾಗಲೀ, ಹಾಜರಾಗತಕ್ಕದ್ದೆಂದು ತಾಕೀದ್ ಮಾಡಲ್ಪಟ್ಟಿರುತ್ತಾರೆ. ಹಾಗೆ ಮಾಡಲಿಕ್ಕೆ ತಪ್ಪಿದರೆ ಅವರುಗಳ ಇನಾಂಗಳು ಪ್ರಥಮತಃ ಜಪ್ತೀಕೆಳಗೆ ತರಲ್ಪಟ್ಟು ಕೇವಟಿಗೆ ಸರ್ಕಾರಕ್ಕೆ ಸೇರಿಸಿಕ್ಕೊಳ್ಳಲ್ಪಡುವದು.

ನಂ. 19. ತಾರೀಖು 16ನೇ ಫಿಬ್ರವರೀ 1877.

ಇದರಿಂದ ಪ್ರಕಟಿಸುವದೇನಂದರೆ,—ಸಿಡ್ಲಘಟ್ಟದ ತಾಲ್ಲೂಕಿನಲ್ಲಿರುವ ಈ ಮಾರ್ಚಿನಲ್ಲಿ ಕಂಡ ಇನಾಮಿಗಾಗಿ ಸಿಡ್ಲಘಟ್ಟದ ಸುಬ್ಬಾಶಾಸ್ತ್ರಿ ಯೆಂಬವರ ಹೆಸರಿನಲ್ಲಿ ಕೊಡಲ್ಪಟ್ಟ 986ನೇ ನಂಬರ್ ಟೈಟಲ್ ಡೀಡ್, ಹುಕ್ಕುಂ ಮಾಫಕ್, ಈ ಆಫಿಸಿಗೆ ಸದರೀಯವರಿಂದ ಮಾಪನ್ ಮಾಡಲ್ಪಡದ ಸಬಬ್ ಸದರೀ ಟೈಟಲ್ ಡೀಡ್ ರದ್ದಾಗಿರುತ್ತೆಂತ ಇದರಿಂದ ತಿಳಿಸಲ್ಪಟ್ಟು ಸದರೀ ಸುಬ್ಬಾಶಾಸ್ತ್ರಿ ಆತನ ಸಹೋದರ ನಾರಾಯಣಶಾಸ್ತ್ರಿ ಯಿವರುಗಳ ಹೆಸರಿನಲ್ಲಿ 1876ನೇ ಆಗಸ್ಟು 16ನೇ ಮರ್ಕುಂ 84ನೇ ನಂಬರ್ ಬಾಬತು ಚೀಫ್ ಕಮ್ಮಿಷನರ್ ಪ್ರೊಸೀಡಿಂಗ್ಸ್ ಮೇರೆ ಡ್ಯೂಪ್ಲಿಕೇಟ್ ನಕ್ಕಲ್ ಕೊಡಲ್ಪಡುವದು.

ಸಮ್ಮತು.	ಗ್ರಾಮ.	ಖುಷ್ಕೀ ಜೇಜವರಿ.		ಇಂದಾಯ.	ಕ್ವಿಟೆರೆಂಟ್.
		ಜಮೀನ್.	ಎ. ಗುಂ.	ರೂ. ಆ. ಪೈ.	ರೂ. ಆ. ಪೈ.
ಸಿಡ್ಲಘಟ್ಟ.	ಅಬ್ಬಲೋಡು.	145 223 225	4·38	6-4-6	0 14 0

R. A. COLE, *Supt. of Inam Settlements.*